೩. ಇದುವರೆವಿಗೂ ಎಷ್ಟು ಕಡೆ ಬಸ್ ಮಾರ್ಗ ರಾಷ್ಟ್ರೀಕರಣಗೊಳಿಸಲಾಗಿದೆ ?

೪. ಪ್ರಸ್ತುತ ರಾಷ್ಟ್ರೀಕರಣಗೊಳಿಸಲು ಯೋಜಿಸಿರುವ ಭಾಗಗಳು ಯಾವುವು ?

೫. ಮೈಸೂರು ಜಿಲ್ಲೆಯನ್ನು ರಾಷ್ಟ್ರೀಕರಣಗೊಳಿಸಲು ಉದ್ದೇಶವಿದೆಯೆ ? ಹಾಗೂ ಯಾವಾಗ ರಾಷ್ಟ್ರೀಕರಣಗೊಳಿಸಲಾಗುವುದು ?

ಶ್ರೀ ಸಿದ್ಧರಾಮಯ್ಯ(ಸಾರಿಗೆ ಮಂತ್ರಿಗಳು).—

೧. ಕರ್ನಾಟಕ ರಾಜ್ಯದಲ್ಲಿ ೨೭೦೨೮ ಗ್ರಾಮಗಳಿದ್ದು, ಈ ಎಲ್ಲ ಗ್ರಾಮಗಳ ಬಸ್ ಸೌಲಭ್ಯದ ಬಗ್ಗೆ ಸಮೀಕ್ಷೆ ಮಾಡಲಾಗಿಲ್ಲ.

೨. ಉದ್ಭವಿಸುವುದಿಲ್ಲ.

೩. ಇದುವರೆಗೆ ೯ ಜಿಲ್ಲೆಗಳಲ್ಲಿ ಬಸ್ ಮಾರ್ಗಗಳನ್ನು ಪೂರ್ಣವಾಗಿ ರಾಷ್ಟ್ರೀಕರಣಗೊಳಿಸಲಾಗಿದೆ. ಹಾಗೂ ೫ ಜಿಲ್ಲೆಗಳಲ್ಲಿ ಭಾಗಶಃ ರಾಷ್ಟ್ರೀಕರಣ ಮಾಡಿದೆ. ಈ ೧೪ ಜಿಲ್ಲೆಗಳ ೧೪೪೬ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸಲಾಗಿದೆ.

೪. ಪ್ರಸ್ತುತ ರಾಷ್ಟ್ರೀಕರಣಗೊಳಿಸಲು ಕೆಳಕಂಡ ಜಿಲ್ಲೆಗಳ ಕರಡು ಯೋಜನೆಗಳನ್ನು ಪ್ರಕಟಿಸಲಾಗಿದೆ. ಚಿತ್ರದುರ್ಗ, ಕೋಲಾರ, ಧಾರವಾಡ, ಮೈಸೂರು, ಉತ್ತರ ಕನ್ನಡ ಹಾಗೂ ರಾಷ್ಟ್ರೀಕರಣವಾಗಿರುವ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಶಿವಮೊಗ್ಗ ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸಲು ಪ್ರಕಟಿಸಲಾಗಿದೆ.

೫. ಹೌದು. ಇಡೀ ಜಿಲ್ಲೆಯಲ್ಲಿನ ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸುವ ದೃಷ್ಟಿಯಿಂದ ೧೨ ಮಾರ್ಗಗಳ ಕರಡು ಯೋಜನೆಯೊಂದನ್ನು ಈಗಾಗಲೇ ಪ್ರಕಟಿಸಲಾಗಿದೆ.

ರಾಜ್ಯದಲ್ಲಿ ಮಕ್ಕಳ ಪೋಷಣೆಗಾಗಿ ಸ್ಪೆಷಲ್ ನ್ಯೂಟ್ರಿಷನ್ ಪ್ರೋಗ್ರಾಂ.

೨೯೬೯. ಶ್ರೀ ಬಿ. ಆರ್. ನೀಲಕಂಠಪ್ಪ(ತರೀಕೆರೆ). —ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಕ್ಕಳ ಪೋಷಣೆಗಾಗಿ ಸ್ಪೆಷಲ್ ನ್ಯೂಟ್ರಿಷನ್ ಪ್ರೋಗ್ರಾಂ ಇದೆಯೇ ?

ಆ) ಈ ಯೋಜನೆಗಾಗಿ ೧೯೮೬-೮೭ ಹಾಗೂ ೧೯೮೭-೮೮ನೇ ಸಾಲಿನಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ?

ಇ) ಈ ಯೋಜನೆಯಲ್ಲಿ ರಾಜ್ಯ ಸರ್ಕಾರದವರು ಹಾಗೂ ಕೇಂದ್ರ ಸರ್ಕಾರದವರು ಮಾಡಿರುವ ಬಂಡವಾಳವೆಷ್ಟು ?

ಶ್ರೀ ಟಿ. ಜಿ. ಆರ್. ಸಿಂಧ್ಯ(ಸಮಾಜ ಕಲ್ಯಾಣ ಸಚಿವರು).—

ಅ) ಇದೆ.

ಆ) ೧೯೮೬-೮೭ರಲ್ಲಿ ೩೨೪.೫೪ ಲಕ್ಷ ರೂ. ಗಳು,
೧೯೮೭-೮೮ರಲ್ಲಿ ೨೪೩.೩೨ ಲಕ್ಷ ರೂ. ಗಳು.

ಇ) ಈ ಯೋಜನೆಗೆ ಕೇಂದ್ರ ಸರಕಾರದ ಬಂಡವಾಳವಿಲ್ಲ. ರಾಜ್ಯ ಸರ್ಕಾರವು ಈ ಯೋಜನೆಗೆ ೧೯೮೬-೮೭ನೇ ಸಾಲಿಗಾಗಿ ೯.೩೫ ಲಕ್ಷ ರೂ. ಗಳನ್ನು ಒದಗಿಸಿದೆ.

ಕುಷ್ಠಿಪಟಿಂಗಳಿಗೆ ಮಾಸಾಶನ ನೀಡುವ ಬಗ್ಗೆ

೪೦೪೦. ಶ್ರೀ ಬಿ. ಆರ್. ನೀಲಕಂಠಪ್ಪ(ತರೀಕೆರೆ) —ಮಾನ್ಯ ಸಮಾಜಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ ಹಾಗೂ ೧೯೮೮-೮೯ನೇ ಸಾಲಿನಲ್ಲಿ ಎಷ್ಟು ಜನ ಕುಷ್ಠಿಪಟಿಂಗಳಿಗೆ ಮಾಸಾಶನ ನೀಡಲಾಗಿದೆ.